**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿಸಿ 44/2022**

**ಪಿ ಡಬ್ಲ್ಯೂ1**

**ಸಾಕ್ಷಿಯನ್ನು ದಿನಾಂಕಃ 20-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎ.ಟಿ. ವಕೀಲರಿಂದ ಆರೋಪಿ ಪರ ವಕೀಲರುಃ**

ನನಗೆ ಆರೋಪಿ 6-7 ವರ್ಷದಿಂದ ಪರಿಚಯ. ನನಗೆ ಆರೋಪಿ ನಾನು ಯಾವುದೊ ವಿಚಾರಕ್ಕಾರಿ ಪೋಲೀಸ್ ಠಾಣೆಗೆ ಹೋಗಿದ್ದು ಪೋಲಿಸ್ ಠಾಣೆಯಲ್ಲಿ ಪರಿಚಯವಾಗಿದ್ದು ಇಬ್ಬರೂ ಸಹ ರಾಜಕೀಯವಾಗಿ ತೊಡಗಿಸಿಕೊಂಡಿದ್ದು ನನಗೆ ಆರೋಪಿ ಸಮಾಜ ಸೇವಕ ಎಂದು ಪರಿಚಯ ಮಾಡಿಕೊಡಿರುತ್ತಾರ. ಅದೇ ರೀತಿ ನಮಗೆ ಸಹಾಯ ಮಾಡುವುದಾರಿ ಪರಿಚಯ ಮಾಡಿಕೊಂಡಿರುತ್ತಾರೆ. ನಾನು ನಮಗೆ ಸೇರಿದ ರೈಸ ಮಿಲ್ ನ್ನು ನೋಡಿಕೊಳ್ಳುತ್ತೇನೆ. ಸರ್ಕಾರಕ್ಕೆ ನಾವು ತೆರಿಗೆಯನ್ನು ಸಹ ಪಾವತಿ ಮಾಡುತ್ತೇವೆ.

ನಾನು 2019 ರಲ್ಲಿ ನಾನು ಆರೋಪಿಗೆ ಹಣ ನೀಡಿದ್ದಾಗಿ ತಿಳಿಸಿದ್ದು ಸದರಿ ಆದಾಯವನ್ನು ನಾನು ಆದಾಯ ತೆರಿಗೆ ಇಲಾಖೆಯವರಿಗೆ ತಿಳಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನೋಡಿ ಹೇಳುತ್ತೇನೆ ಎಂದು ನಂತರ ನಮ್ಮ ಚಿಕ್ಕಮ್ಮ ಕುಮಾರಿ ಯವರ ಕಡೆಯಿಂದ ಪಡೆದು ನೀಡಿರುತ್ತೇನೆ ಎಂದು ತಿಳಿಸಿರುತ್ತಾರೆ.

ನಾನು ಸದರಿ ಹಣವನ್ನುನನ್ನ ಆದಾಯ ತೆರಿಗೆ ಮಾಹಿತಿಯಲ್ಲಿ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸದರಿ ಹಣವನ್ನು ನಮ್ಮ ಚಿಕ್ಕಮ್ಮ ನಿಂದ ಪಡೆದುಕೋಂಡು ನೀಡಿರುತೆತೇನೆ ಎಂದು ತಿಳಿಸಿರುತ್ತಾರೆ. ದಿಃ 02-02-2019 ರ ಒಂದು ತಿಂಗಳ ಮೊದಲು 2018 ನೇ ಇಸವಿಯಲ್ಲಿ ಹಣವನ್ನು ಕೇಳಿದ್ದರೂ ಎಂದು ತಿಳಿಸಿರುತ್ತಾರೆ. ಮೊದಲು ನನಗೆ ಆರೋಪಿ ಯಾರಿಗೂ ಹುಷಾರಿರುವುದಿಲ್ಲ ಎಂದು ನಂತರ ತನಗೆ ಹಣ ಬೇಕು ಎಂದು ಕೇಳಿರುತ್ತಾರೆ.

ನನಗೆ ನಾನು ನೀಡಿರುವ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ನಮ್ಮ ವಕೀಲರು ನೋಡಿಕೊಳ್ಳುತ್ತಾರೆ ಎಂದು ಸುಮ್ಮನಿರುತ್ತೇನೆ. ನಾನು ವಕೀಲರನ್ನು ನೇಮಿಸಿಕೊಂಡಿದ್ದು ಎಲ್ಲಾ ನ್ಯಾಯಾಲಯದ ಕಲಾಪಗಳನ್ನು ನಮ್ಮ ವಕೀಲರು

ನೊಡಿಕೊಳ್ಳುತ್ತಾರೆ. ನನಗೆ ನೋಟೀಸ್, ಸ್ವಿಕೃತಿಗಳನ್ನು ನ್ಯಾಯಾಲಕ್ಕೆ ಹಾಜರು ಪಡಿಸಿ ಗುರುತನ್ನು ಮಾಡಿಕೊಳಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸದರಿ ವಿಚಾರಗಳನ್ನು ನಮ್ಮ ವಕೀಲರು ನೋಡಿಕೊಳ್ಳುತ್ತಾರೆ ಎಂದರೆ ಸರಿ.

ನನಗೆ ಬ್ಯಾಂಕಿನಿಂದ ಸಹಿ ಸರಿಯಿರುವುದಿಲ್ಲ ಎಂದು ಮತ್ತು ಹಣ ಇರುವುದಿಲ್ಲ ಎಂದು ಬಂದಿರುತ್ತದೆ. ದೂರಿನಲ್ಲಿರುವ ವಿಚಾರಗಳು ನನಗೆ ಗೊತ್ತಿರುತ್ತದೆ ಅದರೆ ಹಲವು ವರ್ಷಗಳಾದ ಕಾರಣ ಅಷ್ಟು ನೆನಪಿರುವುದಿಲ್ಲ. ಆರೋಪಿ ಕಾಲಾಭೈರವೇಶ್ವರ ಟ್ರೇಡರ್ಸ ಅಂಗಡಿಯಲ್ಲಿ ಚೆಕನ್ನು ನೀಡಿದ್ದು ಸದರಿ ಚೆಕ್‌ನು ನಾನು ಬ್ಯಾಂಕಿನಲ್ಲಿ ಹಾಾಜರು ಪಡಿಸಿದಾಗ ಸದರಿ ಚೆಕ್ ಕಲರ್ ಜೆರಾಕ್ಸ ಎಂದು ನನ್ನ ಗಮನಕ್ಕೆ ಬಂದಿರುತ್ತದೆ ನಂತರ ಸದರಿ ವಿಚಾರವನ್ನು ಆರೋಪಿಯ ಬಳಿ ಚರ್ಚಿಸಿದಾಗ ಆರೋಪಿ ಸದರಿ ಚೆಕ್ ನ್ನು ಕಾರಿನಲ್ಲಿ ಇಟ್ಟಿದು ಮಳೆಯಿಂದ ನೆನೆದಿರುತ್ತದೆ ಎಂದು ನಂತರ ನಾನು ಪ್ರಶ್ನಿಸಿಲಾಗಿ ನೀರು ಕುಡಿಯುವಾಗ ಚೆಕ್ಕಿನ ಮೇಲೆ ಬಿದ್ದಿತು ಅದನ್ನು ಒರೆಸಿದ್ದೇನೆ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ.

ನನಗೆ ಅರೋಪಿ ಯಾವ ದಿನಾಂಕದಂದು ನನ್ನನ್ನು ಭೇಟಿ ಮಾಡಿದ್ದರೂ ಎಂದು ನನಗೆ ಹೇಳಲಾಗುವುದಿಲ್ಲ. ಬ್ಯಾಂಕಿನವರು ನಾನು ಚೆಕ್ ನ್ನು ಸಲ್ಲಿಸಿದಾಗ ಕಲರ್ ಜೆರಾಕ್ಸ ಚೆಕ್ ಪ್ರತಿಯಿಂದು ನಮೂದಿಸದೆ ಸಹಿ ಸರಿಯಿರುವುದಿಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಚೆಕ್ ನ್ನು ಯಾರು ಬರೆದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ಚೆಕ್ ನ್ನು ಅಂಗಡಿಗೆ ನೀಡಿದ್ದು ನಾನು ಅಂಗಡಿ ಕಡೆಯಿಂದ ಪಡೆದುಕೊಂಡಿರುತ್ತೇನೆ.

ನಿಪಿ 1 ರಲ್ಲಿ ಬರೆದಿರುವ ಸಹಿ ಮತ್ತು ಬೇರೆ ಬರವಣಿಗೆಯು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಮತ್ತು ನೋಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಮೊದಲಾರ್ಥ  ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮದ್ಯಾಹ್ನಕ್ಕೆ ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ್ ಎಸ್)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ.